# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು

ಸಿ.ಸಿ.ನಂಃ **54/2025**

**ಪಿರ್ಯಾದುದಾರರು** : ಬಿ.ಮುನಿವೆಂಕಟಪ್ಪ, **65** ವರ್ಷ,
ಬಿನ್ಃ ಲೇಟ್ ಬಿ.ನಾಗಪ್ಪ,
ಪ್ರೊಪ್ರೈಟರ್ ಆಫ್ ಲಕ್ಷ್ಮೀ ಶ್ರೀನಿವಾಸ
ಡೆಕಾರ್ಡಿಕೇಟಿಂಗ್ ಮಿಲ್,
ವಾಸಃ ಕೆ.ಜಿ.ಎಫ್. ರಸ್ತೆ,
ಮುಳಬಾಗಿಲು ನಗರ.

ವಿರುದ್ಧ

**ಆರೋಪಿ** : ತಮೀಮ್ ಅಹಮ್ಮದ್, **35** ವರ್ಷ,
ಬಿನ್ಃ ನಿಸಾರ್ ಅಹಮ್ಮದ್,
ವ್ಯಾಪಾರ,
ವಾಸಃ ಹೈದರಿನಗರ್, ಬಿ.ಹೆಚ್.ವಿ.ದರ್ಗಾ
ಎದುರು, ಕೆ.ಜಿ.ಎಫ್. ರಸ್ತೆ,
ಮುಳಬಾಗಿಲು ನಗರ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ–251ರ ಪ್ರಕಾರ ಆರೋಪಣೆ

ಆರೋಪಿಯಾದ ನೀವು ಪಿರ್ಯಾದುದಾರರಿಂದ ಪಡೆದುಕೊಂಡ ಸೂಕ್ತ ಮೌಲ್ಯವುಳ್ಳ ಪ್ರತಿಫಲದ ಬಾಬ್ತು ಅವರಿಗೆ ಕೊಡಬೇಕಾಗಿರುವ ಹಣದ ಮರು-ಪಾವತಿಗಾಗಿ ಬೆಂಗಳೂರಿನ ಕಾಮನಹಳ್ಳಿ ಶಾಖೆಯ ಕೊಟ್ಯಾಕ್ ಮಹೀಂದ್ರ ಬ್ಯಾಂಕಿನ ಚೆಕ್ ನಂ.000017, ದಿನಾಂಕಃ10.12.2024ರ ಚೆಕ್ಕನ್ನು ರೂ.3,00,000/- (ಮೂರು ಲಕ್ಷ ರೂಪಾಯಿ) ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ನಗದುಗೊಳಿಸಲು ಮುಳಬಾಗಿಲು ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇಲ್ಲಿಗೆ ಹಾಜರುಪಡಿಸಿದಾಗ ಸದರಿ ಚೆಕ್ಕು 'PAYMENT STOPPED BY DRAWER' ಎಂಬ ಕಾರಣಕ್ಕಾಗಿ ಅನಾದರಣಗೊಂಡಿರುತ್ತದೆ. ಈ ಬಗ್ಗೆ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿಃ07.01.2025ರಂದು ನಿಮಗೆ ನೋಟೀಸ್ ನೀಡಿ ಸದರಿ ಸಂಗತಿಯನ್ನು ತಿಳಿಸಿದಾಗ್ಯೂ ಸಹ, ನೀವು ಪಿರ್ಯಾದುದಾರರಿಗೆ ನಿಯಮಿತ ಅವಧಿಯಲ್ಲಿ ಹಣವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿರುತ್ತೀರಿ. ಆ ಕಾರಣದಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆಯ ಕಲಂ-138ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಅಂತ ನಿಮ್ಮ ವಿರುದ್ಧ ಆರೋಪಣೆ ಹೊರಿಸಲಾಗಿದೆ.

ಪ್ರಃ1 ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೇ?

ಉಃ

ಪ್ರ:2    ಮೇಲಿನ ಆರೋಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉ:

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ, ವಿವರಿಸಿ, ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

(ಹರೀಶ್ ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮುಳಬಾಗಿಲು.

ದಿನಾಂಕ:29.09.2025

ಆರೋಪಿಯ ಸಹಿ